ಪಾಠ 7

# ನಮಗೊಬ್ಬ ಸಹಾಯಕನಿದ್ದಾನೆ



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು:**

ಪವಿತ್ರಾತ್ಮನು ನಮ್ಮ ಸಹಾಯಕನಾಗಿದ್ದಾನೆ

ಪವಿತ್ರಾತ್ಮನ ಫಲ

ಆತ್ಮನಲ್ಲಿ ನಡೆಯುವುದು

ನಿಮ್ಮಲ್ಲಿ ಪವಿತ್ರಾತ್ಮನ ಶಕ್ತಿಯು

ಪವಿತ್ರಾತ್ಮನ ವರಗಳು

## ಪವಿತ್ರಾತ್ಮನು ನಮ್ಮ ಸಹಾಯಕನಾಗಿದ್ದಾನೆ

ಇಷ್ಟರೊಳಗಾಗಿ ನೀವು ಅಂದುಕೊಳ್ಳುತ್ತಿರಬಹುದು "ಇದೆಲ್ಲಾ ನನಗೆ ಜಟಿಲವಾಗಿ ಕಾಣಿಸುತ್ತದೆ. ನನಗೆ ಕ್ರಿಸ್ತನ ಹಾಗೆ ಜೀವಿಸಲು ಸಾಧ್ಯವೋ ನನಗೆ ಗೊತ್ತಿಲ್ಲ, ಮಾಡಬೇಕಾದವುಗಳು ಅನೇಕ ಉಂಟು ಆದರೆ ನನಗೆ ಅವೆಲ್ಲವುಗಳ ಜ್ಞಾಪಕವೂ ಇಲ್ಲ".

ಕುಂದಿ ಹೋಗಬೇಡಿರಿ, ಇದು ನೀವು ತಿಳಿದುಕೊಂಡಷ್ಟು ಕಠಿಣವಲ್ಲ, ಯಾಕೆಂದರೆ ಪವಿತ್ರಾತ್ಮನು ನಮ್ಮ ಸಹಾಯಕನಾಗಿ ಬಂದನು. ಕ್ರಿಸ್ತನ ಹಾಗೆ ಜೀವಿತವು, ನೀವು ಪಾಲಿಸಬೇಕಾದ ಕಟ್ಟುಪಾಡಿನ ಮೇಲಾಗಲಿ ನೀವು ಒಳ್ಳೆಯವಾಗಲೂ ಪ್ರಯತ್ನಪಡುವುದರ ಮೇಲಾಗಲಿ ಆಧಾರಗೊಂಡಿಲ್ಲ. ಇದು ದೇವರು ನಿಮಗಾಗಿ ಮಾಡಿದ್ದನ್ನು, ನೀವು ಅಂಗೀಕರಿಸುವುದರಿಂದ, ಪವಿತ್ರಾತ್ಮನು ನಿಮ್ಮಲ್ಲಿದ್ದು ತನ್ನ ಇಚ್ಛೆಯಿಯು ನಡೆಸುವುದರಿಂದ ಆಗುತ್ತದೆ.

## ನೀವು ಮಾಡಬೇಕಾದದ್ದು

1. ಸದಾ ನಿಮ್ಮೊಂದಿಗಿರಲು ದೇವರು ಕಳುಹಿಸಿಕೊಟ್ಟ ಸಹಾಯಕನು ಯಾರು?
   ...ಅ) ಯಾಜಕನು
   ...ಆ) ಬೋಧಕನು
   ...ಇ) ಪವಿತ್ರಾತ್ಮನು
2. ಕ್ರಿಸ್ತನ ಹಾಗೆ ಜೀವಿತವು ಅಂದರೆ
   ...ಅ) ನೀವು ವಿಧೇಯರಾಗಲೇಬೇಕಾದ ಕಟ್ಟು-ಪಾಡು
   ...ಆ) ಒಳ್ಳೆಯವರಾಗಲು ಸತತ ಪ್ರಯತ್ನ
   ...ಇ) ಕ್ರಿಸ್ತನಂತೆ ಇರಲು ಯತ್ನಿಸುವುದು
   ...ಈ) ಪವಿತ್ರಾತ್ಮನು ನಮ್ಮೊಳಗೆ ಇರಲು ಮತ್ತು ಆತನ ಮಾರ್ಗಕ್ಕಾಗಿ ಬಿಟ್ಟುಕೊಡುವುದು

**ಉತ್ತರಗಳು** : 1ಇ) ಪವಿತ್ರಾತ್ಮನು 2ಈ) ಪವಿತ್ರಾತ್ಮನು ನಮ್ಮೊಳಗೆ ಇರಲು ಮತ್ತು ಆತನ ಮಾರ್ಗಕ್ಕಾಗಿ ಬಿಟ್ಟುಕೊಡುವುದು



ಪವಿತ್ರಾತ್ಮನು ಒಂದೇ ಸಮಯದಲ್ಲಿ ಎಲ್ಲೆಡೆ ಇದ್ದಾನೆ. ಯೇಸು ಭೂಲೋಕದಲ್ಲಿರುವಾಗ ಆತನು ಒಂದು ಸಮಯದಲ್ಲಿ ಒಂದೇ ಸ್ಥಳದಲ್ಲಿ ಮಾತ್ರ ಇರಲು ಸಾಧ್ಯವಿತ್ತು. ಆತನು ಸ್ವರ್ಗಕ್ಕೆ ಏರಿ ಹೋದಾಗ ಪವಿತ್ರಾತ್ಮನನ್ನು ತನ್ನೆಲ್ಲ ಶಿಷ್ಯರೊಳಗೆ ಇರಲು, ಮಾರ್ಗದರ್ಶನ ಮಾಡಲು ಮತ್ತು ನಮ್ಮ ಸಮಸ್ಯೆಗಳಲ್ಲಿ ಸಹಾಯ ಮಾಡಲು ಕಳುಹಿಸಿಕೊಟ್ಟನು.

ಯೋಹಾನ 14:16,26 ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು, ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸುಗಡ ಇರುವುದಕ್ಕೆ ಕೊಡುವನು. ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು.

**ನೀವು ಮಾಡಬೇಕಾದದ್ದು**

3. ಪವಿತ್ರಾತ್ಮನು ಇರಲು ಬಂದದ್ದು

...ಅ) ಎಲ್ಲ ಸಮಯದಲ್ಲಿ ಪ್ರತಿ ಶಿಷ್ಯನೊಂದಿಗೆ ಇರಲು

...ಆ) ಕೆಲವು ಶಿಷ್ಯರೊಂದಿಗೆ ಮಾತ್ರ ಇರಲು

ಉತ್ತರ : 3. ಅ) ಎಲ್ಲ ಸಮಯದಲ್ಲಿ ಪ್ರತಿ ಶಿಷ್ಯನೊಂದಿಗೆ ಇರಲು

## ಪವಿತ್ರಾತ್ಮನ ಫಲ

ನಿಮ್ಮ ಜೀವಿತದಲ್ಲಿ ಪವಿತ್ರಾತ್ಮನ ಸಾನಿಧ್ಯವು ಪರಿಣಾಮಗಳನ್ನು ಉಂಟು ಮಾಡುವುದು ಅವುಗಳಿಗೆ ಆತ್ಮ ಫಲವೆನ್ನುತ್ತಾರೆ. ನೀವು ಒಳ್ಳೆಯದನ್ನು ಮಾಡುವಂತೆ ಆತನು ಬಯಕೆ ಹುಟ್ಟಿಸುವನು ಮತ್ತು ಅದನ್ನು ಮಾಡಲು ನಿಮಗೆ ಬಲವನ್ನು ಕೊಡುವನು. ನೀವು ಆತನಿಗೆ ನಿಮ್ಮಲ್ಲಿ ಈ ರೀತಿ ಕಾರ್ಯ ಮಾಡಲು ಬಿಟ್ಟುಕೊಟ್ಟಂತೆ, ಆತನು ನಿಮ್ಮಲ್ಲಿ ಕ್ರಿಸ್ತನಂತಹ ಅದ್ಭುತ ಗುಣ-ನಡತೆಯನ್ನು ವೃದ್ಧಿಗೊಳಿಸುವನು. ನಿಮ್ಮ ಉತ್ತಮವರ್ತನೆ, ಮಾತುಕತೆ ಮತ್ತು ಕಾರ್ಯಗಳು ರುಚಿಯಾದ ಹಣ್ಣಿನ ಹಾಗೆ ಇರುವುವು. ನಿಮ್ಮ ಕುಟುಂಬದವರು ಮತ್ತು ಸ್ನೇಹಿತರು ನಿಮ್ಮೊಂದಿಗಿರುವುದಕ್ಕಾಗಿ ಸಂತೋಷಿಸುವರು ಆದರ ಎಲ್ಲದಕ್ಕಿಂತ ಹೆಚ್ಚಾಗಿ ನಿಮ್ಮ ಸ್ವರ್ಗದ ತಂದೆಯು ಈ ಆತ್ಮದಫಲ ಕಂಡು ಸಂತೋಷಿಸುವನು.

ಗಲಾತ್ಯ 5:22,23, ಆದರೆ ದೇವಾತ್ಮನಿಂದ ಉಂಟಾಗುವ ಫಲವೇನಂದರೆ ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮಶಾಸ್ತ್ರವು ಆಕ್ಷೇಪಿಸುವುದಿಲ್ಲ.

**ಯೋಹಾನ** 15:8 ನೀವು ಬಹಳ ಫಲ ಕೊಡುವುದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವುದು.

**ನೀವು ಮಾಡಬೇಕಾದದ್ದು**

4. "ಆತ್ಮದ ಫಲ"ವೆಂದರೆ

...ಅ) ಆತ್ಮೀಕ ಕೂಟದಲ್ಲಿ ರಕ್ಷಿಸಲ್ಪಟ್ಟ ಆತ್ಮಗಳು

...ಆ) ಪವಿತ್ರಾತ್ಮನು ನಮ್ಮ ಗುಣ-ನಡತೆಯಲ್ಲಿ ಉಂಟುಮಾಡುವ ಉತ್ತಮ ಸ್ವಭಾವ

5. ಗಲಾತ್ಯದವರಿಗೆ 5 22,23 ಬಾಯಿಪಾಠ ಮಾಡಿರಿ

**ಉತ್ತರ** : 4ಆ) ಪವಿತ್ರಾತ್ಮನು ನಮ್ಮ ಗುಣನಡತೆಯಲ್ಲಿ ಉಂಟುಮಾಡುವ ಉತ್ತಮ ಸ್ವಭಾವ

## ಆತ್ಮನಲ್ಲಿ ನಡೆಯುವುದು

ನಮ್ಮ ಸ್ವಂತ ಮಾರ್ಗವಿರಲಿ ಎಂಬುದು ಸ್ವಾಭಾವಿಕ. ಇದು ಮಾನವ ಸಹಜ ಪ್ರವೃತ್ತಿ. ನಾವು ಇಂಥಿಂಥಿದನ್ನು ಮಾಡಬೇಕೆಂದು ತಿಳಿದಿದ್ದರೂ ನಾವು ನಮಗೆ ಇಷ್ಟವಾದುದ್ದನ್ನು ಮಾಡಲು ಬಯಸುತ್ತೇವೆ, ಇದಕ್ಕಾಗಿಯೆ ನಾವು ದೇವರ ಚಿತ್ತವನ್ನು ಮಾಡಿರಿ ಮತ್ತು ಇದುವೇ ಮಾರ್ಗ ಎಂದು ಹೇಳುವ ಪವಿತ್ರಾತ್ಮನ ಒಳ ಧ್ವನಿಯನ್ನು ಕೇಳುವುದು ಅವಶ್ಯವಾಗಿದೆ.

ಗಲಾತ್ಯದವರಿಗೆ 5:16,25. ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ, ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವುದಿಲ್ಲ. ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನೇ ಅನುಸರಿಸಿ ನಡೆಯೋಣ.

## ನೀವು ಮಾಡಬೇಕಾದದ್ದು

6. ಗಲಾತ್ಯದವರಿಗೆ 5:16ರಲ್ಲಿ ಹೇಳಿದ "ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವುದಿಲ್ಲ" ಎಂಬುದರ ಅರ್ಥ

...ಅ) ನಿಮಗೆ ಬೇಕಾದದ್ದು ನಿಮಗೆ ಸಿಕ್ಕುವುದಿಲ್ಲ

...ಆ) ನೀವು ನಿರಾಶಾದಾಯಕ ಜೀವಿತವನ್ನು ಜೀವಿಸುತ್ತೀರಿ

...ಇ) ನಿಮ್ಮದ್ದೇ ಮಾರ್ಗವಿರಲು ನೀವು ಸ್ವಾಭಾವಿಕ ಆಶೆಯ ಮೇಲೆ ಜಯಹೊಂದುತ್ತೀರಿ

**ಉತ್ತರ** : 6ಇ) ನಿಮ್ಮದ್ದೇ ಮಾರ್ಗವಿರಲು ನೀವು ಸ್ವಭಾವಿಕ ಆಶೆಯ ಮೇಲೆ ಜಯಹೊಂದುತ್ತೀರಿ

ದೇವರ ಆತ್ಮನು ನಿಮ್ಮನ್ನು ನಿರ್ದೇಶಿಸಿ ಬಲಪಡಿಸುವನು ಆದರೆ ಆತನು ನಿಮ್ಮನ್ನು ಸ್ವರ್ಗದ ದಾರಿಯಲ್ಲಿ ನಡೆಯಿಸಲಾರನು. ನೀವು ನಿಮ್ಮ ಸ್ವಂತ ಕಾಲುಗಳ ಮೇಲೆಯೆ ನಡೆಯಬೇಕು. ಆತನೇ ನಿಮ್ಮನ್ನು ನಡೆಸುವಂತೆ ನೀವು ಪವಿತ್ರಾತ್ಮನೊಂದಿಗೆ ಸಹಕರಿಸಬೇಕು. ಇದನೇ ಸತ್ಯವೇದವು ಪವಿತ್ರಾತ್ಮನಲ್ಲಿ ನಡೆಯುವುದು ಅನ್ನುತ್ತದೆ. ನೀವು ಇದನ್ನು ಈಗಾಗಲೇ ಸತ್ಯವೇದವು ಓದುವ ಮುಖಾಂತರ ಮತ್ತು ಅದರ ಬೋಧನೆಗಳನ್ನು ಪಾಲಿಸುವುದರ ಮೂಲಕ ಮಾಡುತ್ತಿದ್ದೀರಿ.

## ನೀವು ಮಾಡಬೇಕಾದದ್ದು

7. ಆತ್ಮನಲ್ಲಿ ನಡೆಯುವುದು ಅಂದರೆ

...ಅ) ಒಂದು ಎಡೆಬಿಡದೆ ಭಾವಾವೇಶದ ಜೀವಿತ

...ಆ) ನಿಮ್ಮ ಅನುದಿನದ ಜೀವಿತದಲ್ಲಿ ಪವಿತ್ರಾತ್ಮನ ನಡೆಸುವಿಕೆಯನ್ನು ಅನುಸರಿಸುವುದು

**ಉತ್ತರ** : 7ಅ) ನಿಮ್ಮ ಅನುದಿನದ ಜೀವಿತದಲ್ಲಿ ಪವಿತ್ರಾತ್ಮನ ನಡೆಸುವಿಕೆಯನ್ನು ಅನುಸರಿಸುವುದು.

## ನಿಮ್ಮಲ್ಲಿ ಪವಿತ್ರಾತ್ಮನ ಶಕ್ತಿಯು

ದೇವರಿಗಾಗಿ ಮಾಡಬೇಕಾದ ಕೆಲಸಕ್ಕೆ ತಮ್ಮ ಸ್ವಂತ ಶಕ್ತಿಗಿಂತಲು ಅಧಿಕವಾದ ಶಕ್ತಿಯ ಅವಶ್ಯಕತೆಯು ತನ್ನ ಶಿಷ್ಯರಿಗೆ ಬೇಕಾಗಿದೆ ಎಂದು ಯೇಸು ತಿಳಿದಿದ್ದನು. ಆದುದರಿಂದ ಆತನು ಅವರು ಶಕ್ತಿಯನ್ನು ಹೊಂದಿ ಲೋಕದಲ್ಲಿ ಸಾಕ್ಷಿಯಾಗಿ ಇರಲು ಪವಿತ್ರಾತ್ಮನ ತುಂಬಿಸುವಿಕೆಗಾಗಿ ಅವರು ಕಾಯಬೇಕೆಂದು ಹೇಳಿದನು.

> ಅಪೋಸ್ತಲರ ಕೃತ್ಯಗಳು 1:4,5,8 "ಯೋಹಾನನು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ನಿಮಗಾದರೂ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವುದು... ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ' ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು."

> ಸ್ನಾನಿಕನಾದ ಯೋಹಾನನು ಯೇಸುವನ್ನು ಕುರಿತು ಹೇಳಿದ್ದು:

> ಲೂಕ 3:16 "ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು."

**ನೀವು ಮಾಡಬೇಕಾದದ್ದು**

8. ಅಪೋಸ್ತಲರ ಕೃತ್ಯಗಳು 1:4,5,8 ಮೂರು ಸಾರಿ ಓದಿರಿ
9. ಯೋಹಾನನು ಹೇಳಿದ್ದು ಯೇಸು ದೀಕ್ಷಾಸ್ನಾನ ಮಾಡಿಸುವನೆಂದದ್ದು

   ...ಅ) ನೀರಿನ ಮೂಲಕವಾಗಿ ಪಶ್ಚಾತ್ತಾಪ ಪಡುವವರಿಗೆ

   ...ಆ) ಪವಿತ್ರಾತ್ಮನಿಂದ ಮತ್ತು ಬೆಂಕಿಯಿಂದ

ಉತ್ತರ : 9ಆ) ಪವಿತ್ರಾತ್ಮನಿಂದ ಮತ್ತು ಬೆಂಕಿಯಿಂದ

ಅಪೋಸ್ತಲರ ಕೃತ್ಯಗಳ ಪುಸ್ತಕವು ನಮಗೆ ದೇವರು ತನ್ನ ವಾಗ್ದಾನವನ್ನು ಪಂಚಾಶತ್ತಮ ದಿನದಲ್ಲಿ ಹೇಗೆ ನೆರವೇರಿಸಿದ ಎಂಬುದರ ಬಗ್ಗೆ ಒಂದು ರೋಮಾಂಚಕ ಕತೆಯನ್ನು ಮತ್ತು ಅದರ ನಂತರದಲ್ಲಾದ ಅದ್ಭುತ ಪರಿಣಾಮಗಳನ್ನು ತಿಳಿಸುತ್ತದೆ.

> ಅಪೋಸ್ತಲರ ಕೃತ್ಯಗಳು 2:4,5,7,11. ಆಗ ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವುದಕ್ಕೆ ಪ್ರಾರಂಭಿಸಿದರು. ಆಕಾಶದ ಕೆಳಗಿರುವ ಎಲ್ಲಾ ದೇಶದವರೊಳಗಿಂದ ಬಂದ ಸದ್ಭಕ್ತರಾದ ಯೆಹೂದ್ಯರು ಯೆರೂಸಲೇಮಿನಲ್ಲಿ ವಾಸವಾಗಿದ್ದರು. ಎಲ್ಲರೂ ಆಶ್ಚರ್ಯದಿಂದ ಬೆರಗಾಗಿ - ಇಗೋ, ಮಾತಾಡುತ್ತಿರುವ ಇವರೆಲ್ಲರು ಗಲಿಲಾಯದವರಲ್ಲವೇ, ನಮ್ಮ ನಮ್ಮ ಭಾಷೆಗಳಲ್ಲಿ ಇವರು ದೇವರ ಮಹತ್ತುಗಳ ವಿಷಯವಾಗಿ ಹೇಳುವುದನ್ನು ಕೇಳುತ್ತೇವೆ ಅಂದುಕೊಂಡರು.

ಈ ಪವಿತ್ರಾತ್ಮನ ದೀಕ್ಷಾಸ್ನಾನವು ಅಥವಾ ಪವಿತ್ರಾತ್ಮನ ತುಂಬಿಸುವಿಕೆಗೆ ಪಂಚಾಶತ್ತಮದ ಅನುಭವವೆನ್ನುತ್ತಾರೆ ಯಾಕಂದರೆ ಇದು ಆದದ್ದು ಪಂಚಶತ್ತಮದ ದಿನದಂದು

## ನೀವು ಮಾಡಬೇಕಾದದ್ದು

10. ಪವಿತ್ರಾತ್ಮನ ದೀಕ್ಷಾಸ್ನಾನಕ್ಕೆ ಹೀಗೆ ಕರೆಯುತ್ತಾರೆ

...ಅ) ಕ್ರಿಸ್ತನ ದೇಹದಲ್ಲಿ ದೀಕ್ಷಾಸ್ನಾನ

...ಆ) ಮುಳುಗಿಸುವ ದೀಕ್ಷಾಸ್ನಾನ

...ಇ) ಪಂಚಾಶತ್ತಮದ ಅನುಭವ

ಉತ್ತರ : 10.ಇ) ಪಂಚಾಶತ್ತಮದ ಅನುಭವ

ಪವಿತ್ರಾತ್ಮನು ನಮಗೆ ಶಕ್ತಿ ಕೊಡುವನೆಂದು ಯೇಸು ವಾಗ್ದಾನ ಮಾಡಿದ. ಈ ಶಕ್ತಿಯು ಎರಡು ಉದ್ದೇಶಗಳಿಗಾಗಿ ಇದೆ:

* ಇತರರಿಗೆ ಯೇಸುವಿನ ಕುರಿತು ಹೇಳಲು ನನಗೆ ಸಹಾಯ ಮಾಡುತ್ತದೆ.

ಹೆಚ್ಚು ಪರಿಣಾಮಕಾರಿಯಾಗಿ ಪ್ರಾರ್ಥನೆ ಮಾಡಲು ನಮಗೆ ಸಹಾಯ ಮಾಡುತ್ತದೆ.

ಶಿಷ್ಯರು ಪವಿತ್ರಾತ್ಮನ ಬಲದಲ್ಲಿ ಸಾಕ್ಷಿ ಕೊಡುತ್ತಾ ಪ್ರಾರ್ಥಿಸಿದರೆ, ಆ ಪ್ರಾರ್ಥನೆಗೆ ಉತ್ತರವಾಗಿ ಅನೇಕ ಅದ್ಭುತ ಕಾರ್ಯಗಳಾಗುವುವು ಮತ್ತು ಅನೇಕ ಆತ್ಮಗಳು ಕರ್ತನ ಕಡೆಗೆ ತಿರಿಗಿಕೊಳ್ಳುವವು.

> ಅಪೋಸ್ತಲರ ಕೃತ್ಯಗಳು 2:14,41. ಹೇಗೆ ಪೇತ್ರನು ಹನ್ನೊಂದು ಮಂದಿ ಅಪೋಸ್ತಲರ ಸಹಿತ ಎದ್ದು ನಿಂತು ಘಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗ ಮಾಡಿದನು... ಅವನು ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು.

> ಅಪೋಸ್ತಲರ ಕೃತ್ಯಗಳು 4:31 ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು.

## ನೀವು ಮಾಡಬೇಕಾದದ್ದು

11. ಪವಿತ್ರಾತ್ಮನಲ್ಲಿನ ದೀಕ್ಷಾಸ್ನಾನವು ಶಿಷ್ಯರಿಗೆ ಶಕ್ತಿಯನ್ನು ಕೊಡಲು ಕಾರಣ

...ಅ) ಕ್ರಿಸ್ತನಿಗಾಗಿ ಸಾಕ್ಷಿ ಕೊಡಲು ಮತ್ತು ಪರಿಣಾಮಕಾರಿಯಾಗಿ ಪ್ರಾರ್ಥಿಸಲು

...ಆ) ಇತರರನ್ನು ತಮ್ಮ ಆತ್ಮೀಕ ಜೀವಿತದ ಕುರಿತಾಗಿ ಪ್ರಭಾವ ಬೀರುವುದು.

...ಇ) ಮಹತ್ಕಾರ್ಯಗಳನ್ನು ಮಾಡುವುದು

**ಉತ್ತರ**:11ಅ) ಕ್ರಿಸ್ತನಿಗಾಗಿ ಸಾಕ್ಷಿ ಕೊಡಲು ಮತ್ತು ಪರಿಣಾಮಕಾರಿಯಾಗಿ ಪ್ರಾರ್ಥಿಸರಲು

ಇದೇ ಶಕ್ತಿಯು ಈಗಿನ ಶಿಷ್ಯರಿಗೂ ಬೇಕು. ಇಪ್ಪತ್ತನೇ ಶತಮಾನದ ಆರಂಭದಿಂದ ಅನೇಕ ಲಕ್ಷಾವಧಿ ಜನರು, ಲೋಕದಲ್ಲಿನ ಬೇರೆ ಬೇರೆ ಸಭೆಗಳವರು ಶಕ್ತಿಯ ದೀಕ್ಷಾಸ್ನಾನವಾದ ಈ ಪಂಚಾಶತ್ತಮದ ಅನುಭವವನ್ನು ಹೊಂದಿದ್ದಾರೆ.

> ಅಪೋಸ್ತಲರ ಕೃತ್ಯಗಳು 2:38,39. ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ. ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ.

### ನೀವು ಮಾಡಬೇಕಾದದ್ದು

12. ನಿಮ್ಮ ಜೀವಿತದಲ್ಲಿ ಈ ಪವಿತ್ರಾತ್ಮನ ಶಕ್ತಿಯು ಬೇಕೋ?...........

ಇತರರಿಗೆ ಸುಲಭವಾಗಿ ಕರ್ತನ ಕುರಿತು ತಿಳಿಸಲು ನಿಮ್ಮ ಆತ್ಮದಲ್ಲಿ ಈ ಉರಿಯುತ್ತಿರುವ ದೇವರ ಬೆಂಕಿಯು ನಿಮಗೆ ಬೇಕೋ?......................

ನೀವು ಹೆಚ್ಚು ಪರಿಣಾಮಕಾರಿಯಾಗಿ ಪ್ರಾರ್ಥಿಸಬೇಕೆಂದಿದ್ದಿರೋ?.............

ಈ ಅದ್ಭುತ ಪಂಚಾಶತ್ತಮ ದಿನದ ಅನುಭವವು ನಿಮಗಾಗಿ ಇದೆ. ದೇವರು ನಿಮ್ಮನ್ನು ಪವಿತ್ರಾತ್ಮದಿಂದ ದೀಕ್ಷಾಸ್ನಾನ ಮಾಡಿಸುವಂತೆ ಪ್ರಾರ್ಥಿಸಿರಿ.

## ಪವಿತ್ರಾತ್ಮನ ವರಗಳು

ಕ್ರಿಸ್ತನು ತನ್ನ ಸಭೆಯು ಪೂರ್ಣ ಆತ್ಮೀಕ ಶಕ್ತಿಯುಳ್ಳದ್ದಾಗಿರಬೇಕೆಂದು ಬಯಸುತ್ತಾನೆ. ಆದುದರಿಂದ ಪವಿತ್ರಾತ್ಮನು ಅದರ ಬೇರೆ ಬೇರೆ ಸದಸ್ಯರುಗಳಿಗೆ ವಿಶೇಷ ವರಗಳನ್ನು ಮತ್ತು ಸಾಮರ್ಥ್ಯವನ್ನು ಕೊಡುತ್ತಾನೆ. ಈ ವಿಧದಲ್ಲಿ ಪ್ರತಿ ಸದಸ್ಯನಿಗೆ ಸಭೆಯ ಕೆಲಸ ಮತ್ತು ಬೆಳವಣಿಗೆಯಲ್ಲಿ ಪಾಲುಬರುವುದು.

1 ಕೊರಿಂಥದವರಿಗೆ 12:4,7,11. ವರಗಳಲ್ಲಿ ಬೇರೆ ಬೇರೆ ವಿಧಗಳುಂಟು. ದೇವರಾತ್ಮನು ಒಬ್ಬನೇ ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ

ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ. ಈ ವರಗಳೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡೆಸುತ್ತಾನೆ.

**ನೀವು ಮಾಡಬೇಕಾದದ್ದು**

13. ಪವಿತ್ರಾತ್ಮನ ವರಗಳು ಬೇಕಾಗಿರುವುದು

    ...ಅ) ಆದಿ ಸಭೆಯ ಅಪೋಸ್ತಲರಿಗೆ ಮಾತ್ರ

    ...ಆ) ಬೋಧಕರಿಗೆ ಮಾತ್ರ

    ...ಇ) ಇಂದಿನ ಸಭೆಯ ಸದಸ್ಯರಿಗೆ

14. ಲೋಕಾದ್ಯಂತ ಪಂಚಾಶತ್ತಮದ ಭಕ್ತಿಸಂಜೀವನವನ್ನು ದೇವರು ಮುಂದುವರಿಸುವಂತೆ ಪ್ರಾರ್ಥಿಸಿರಿ.

15. ಪವಿತ್ರಾತ್ಮನು ನಿಮ್ಮ ಸಭೆಯ ಸದಸ್ಯರುಗಳಿಗೆ ತನ್ನ ವರಗಳನ್ನು ಕೊಡುವಂತೆ ಪ್ರಾರ್ಥಿಸಿರಿ.

ಉತ್ತರ : 13. ಇ) ಇಂದಿನ ಸಭೆಯ ಸದಸ್ಯರಿಗೆ